ಗೋಹತ್ಯೆ ನಿಷೇಧ ಹಾಗೂ ಪಶುಸಂಗೋಪನಾ ಕಾಯ್ದೆ ಕುರಿತು

71 - ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಗೋಹತ್ಯೆ ಹಾಗೂ ಪಶುಸಂಗೋಪನಾ ಕಾಯ್ದೆ ಇದ್ದರೂ ಕೂಡ, ಅದರ ಉಲ್ಲಂಘನೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಕಾಯ್ದೆಯನ್ನು ಮತ್ತಷ್ಟು ಬಿಗಿ ಮಾಡುವ ಬಗ್ಗೆ ಸರ್ಕಾರವನ್ನು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶಾಂತಿನಗರ ಕ್ಷೇತ್ರದಲ್ಲಿ ವಿದ್ಯುತ್ ಸ್ಥಗಿತ

72 - ಶ್ರೀಮತಿ ಡಿ.ಬಿ. ಹೇಮಾವತಿ (ಶಾಂತಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಶಾಂತಿನಗರ ವಿಧಾನ ಸಭಾ ಕ್ಷೇತ್ರದ ನೀಲಸಂದ್ರ, ವಿವೇಕನಗರ, ಅಕ್ಕಿ ತಿಮ್ಮನಹಳ್ಳಿ, ಶಾಂತಿನಗರ, ದೊಮ್ಮಲೂರು ಹಾಗು ಇತರ ಪ್ರದೇಶಗಳಲ್ಲಿ ಪದೇ ಪದೇ ವಿದ್ಯುತ್ ನಿಲುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಹಾಗಿದ್ದರೆ, ಅದಕ್ಕೆ ಕಾರಣವೇನು*

3) *ಮೇಲಿನ ಸ್ಥಳಗಳಲ್ಲಿ ಪದೇ ಪದೇ ವಿದ್ಯುತ್ ನಿಲುಗಡೆಯನ್ನು ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

1) ಶಾಂತಿನಗರ ಹಾಗೂ ಅಕ್ಕಿತಿಮ್ಮನಹಳ್ಳಿ ಪ್ರದೇಶಗಳಲ್ಲಿ ಪದೇ ಪದೇ ವಿದ್ಯುತ್ ಅಡಚಣೆಯುಂಟಾಗುತ್ತಿದೆ. ಆದರೆ, ನೀಲಸಂದ್ರ, ವಿವೇಕನಗರ ಹಾಗೂ ದೊಮ್ಮಲೂರು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಪದೇ ಪದೇ ಅಡಚಣೆ ಉಂಟಾಗುತ್ತಿಲ್ಲ.

2) ಆಸ್ಟಿನ್ ಟೌನ್ ಎಂಯುಎಸ್ಎಸ್‌ನಿಂದ ಸಿದ್ದಯ್ಯ ರೋಡ್‌ವರೆಗೆ ವಿದ್ಯುತ್ ಸರಬರಾಜು ಮಾಡುವ 11 ಕೆ.ವಿ. ಕೇಬಲ್‌ನಲ್ಲಿ ದೋಷವುಂಟಾಗಿರುವುದರಿಂದ ಶಾಂತಿನಗರ, ಅಕ್ಕಿತಿಮ್ಮನ ಹಳ್ಳಿ ಪ್ರದೇಶಗಳ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗಲು ಮುಖ್ಯ ಕಾರಣವಾಗಿದೆ. ಹಾಗೆಯೇ, ವಿದ್ಯುತ್ ಉತ್ಪಾದನೆಯ ಕೊರತೆಯ ಸಂದರ್ಭದಲ್ಲಿ ಲೋ ವೋಲ್ಟೇಜ್ ಇರುವಾಗ, ಮುಖ್ಯ ಪ್ರಸರಣಾ ಮಾರ್ಗಗಳ ಮೇಲ್ವೇಜ್ ಇತ್ಯಾದಿ ಕಾರಣಗಳಿಂದ ಬೆಳಿಗ್ಗೆ ಹಾಗೂ ಸಂಜೆಯ ಪೀಕಲೋಡ್ ಅವಧಿಯಲ್ಲಿ ಮಂಡಳಿಯ ಅನಿರ್ಧಿಷ್ಟಿತ ವಿದ್ಯುತ್ ನಿಲುಗಡೆಯನ್ನು ಬೆಂಗಳೂರು ನಗರದಾದ್ಯಂತ ಕೆಲವೊಮ್ಮೆ ಮಾಡುವುದು.